ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಚಾಮರಾಜನಗರ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ, ನ್ಯಾಕ್‌ನಿಂದ B+ (CGPA: 2.74) ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440 ಚಾಮರಾಜನಗರ ಜಿಲ್ಲೆ**

☎: 08224-252149 jsscwk@gmail.com www. jsscwkgl.org

ಕೊಳ್ಳೇಗಾಲ: 2.4.2025 ಒಂದು ವರ್ಷದಲ್ಲಿ ಒಂದು ದೇಶದ ಆದಾಯ ಮತ್ತು ವೆಚ್ಚಗಳನ್ನು ಒಳಗೊಂಡಿರುವ ಒಂದು ನಿರ್ಧಿಷ್ಟವಾದ ಪಟ್ಟಿಯನ್ನು ಮುಂಗಡ ಪತ್ರ ಎನ್ನುವರು. ಯಾವ ವಲಯಕ್ಕೆ ಎಷ್ಟು ಹಣ, ಎಷ್ಟು ವೆಚ್ಚ ಮುಂತಾದವುಗಳನ್ನು ಮುಂಗಡ ಪತ್ರ ತಿಳಿಸುತ್ತದೆ. ಒಂದು ದೇಶದಲ್ಲಿ ಎರಡು ರೀತಿಯ ಬಜೆಟ್ ಮಂಡನೆಯಾಗುತ್ತದೆ. ಕೇಂದ್ರ ಮತ್ತು ರಾಜ್ಯ ಬಜೆಟ್. ಮುಂದಿನ ರೂಪುರೇಷೆಗಳು, ಯೋಜನೆಗಳನ್ನು ಹಾಕಿಕೊಂಡು ಆರ್ಥಿಕ ಪ್ರಗತಿಯನ್ನು ಸಾಧಿಸಲು ಬಜೆಟ್ ಅನುಕೂಲವಾಗುತ್ತದೆ ಎಂದು ಡಾ.ಪವಿತ್ರ ಆರ್ ಹೆಚ್, ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ರವರು ತಿಳಿಸಿದರು.

ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಅರ್ಥಶಾಸ್ತ್ರ ವಿಭಾಗದ ವತಿಯಿಂದ ಆಯೋಜಿಸಿದ್ದ **"2025-26 ಸಾಲಿನ ಮುಂಗಡ ಪತ್ರದ ವಿಶ್ಲೇಷಣೆ"** ಕುರಿತ ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯರಾದ ಡಾ. ಹೆಚ್ ಎಸ್ ಕೊಂಗಳಪ್ಪ ಮಾತನಾಡಿ ದೇಶದ ತೆರಿಗೆ ಹಣವನ್ನು ಕೆಲವು ಆಧಾರದ ಮೇಲೆ ರಾಜ್ಯಗಳಿಗೆ ಹಂಚಿಕೆ ಮಾಡಲಾಗುತ್ತದೆ. ಭೌಗೋಳಿಕ ಆಧಾರದಿಂದ, ಜನಸಂಖ್ಯೆ ಆಧಾರದಿಂದ ಕೃಷಿ, ಕೈಗಾರಿಕೆ ಸೇವಾ ವಲಯದ ಆಧಾರದಿಂದ ರಾಜ್ಯಗಳಿಗೆ ತೆರಿಗೆ ಹಣವನ್ನು ಕೇಂದ್ರ ಹಂಚಿಕೆ ಮಾಡುತ್ತದೆ ಎಂದು ಹೇಳಿದರು.

ವೇದಿಕೆಯಲ್ಲಿ ಐಕ್ಯೂಎಸಿ ಸಂಚಾಲಕರು ಹಾಗೂ ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಮಮತ ಎಸ್ ಹಾಗೂ ಅರ್ಥಶಾಸ್ತ್ರ ಮುಖ್ಯಸ್ಥರಾದ ಶ್ರೀಮತಿ ಪುಟ್ಟಮ್ಮರವರು ಉಪಸ್ಥಿತರಿದ್ದರು.

ಡಾ.ಪವಿತ್ರ ಆರ್ ಹೆಚ್, ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,  ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ರವರು **"2025-26 ಸಾಲಿನ ಮುಂಗಡ ಪತ್ರದ ವಿಶ್ಲೇಷಣೆ"** ಕುರಿತ ವಿಶೇಷ ಉಪನ್ಯಾಸ ನೀಡುತ್ತಿರುವುದು. ಚಿತ್ರದಲ್ಲಿ ಅರ್ಥಶಾಸ್ತ್ರ ಮುಖ್ಯಸ್ಥರಾದ ಶ್ರೀಮತಿ ಪುಟ್ಟಮ್ಮ, ಪ್ರಾಚಾರ್ಯರಾದ ಡಾ. ಹೆಚ್ ಎಸ್ ಕೊಂಗಳಪ್ಪ ಹಾಗೂ ಐಕ್ಯೂಎಸಿ ಸಂಚಾಲಕರು ಹಾಗೂ ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಮಮತ ಎಸ್




ಪ್ರಾಚಾರ್ಯರಾದ ಡಾ. ಹೆಚ್ ಎಸ್ ಕೊಂಗಳಪ್ಪರವರು ಅಧ್ಯಕ್ಷೀಯ ಭಾಷಣ ಮಾಡುತ್ತಿರುವುದು. ಚಿತ್ರದಲ್ಲಿ ಅರ್ಥಶಾಸ್ತ್ರ ಮುಖ್ಯಸ್ಥರಾದ ಶ್ರೀಮತಿ ಪುಟ್ಟಮ್ಮ,  ಡಾ.ಪವಿತ್ರ ಆರ್ ಹೆಚ್, ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,  ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ಹಾಗೂ ಐಕ್ಯೂಎಸಿ ಸಂಚಾಲಕರು ಹಾಗೂ ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಮಮತ ಎಸ್

